## ಕರ್ನಾಟಕ@50/ ಭಾಷೆ

ಸಮಿತಿ'ಯನ್ನೂ ಈ ಸಂದರ್ಭ ಪ್ರಮುಖ ಆಂದೋಲನವಾಗಿ ನೆನಪಿಸಿಕೊಳ್ಳಲೇಬೇಕು.

1985ರಲ್ಲಿ 'ಸಮಗ್ರ ಕನ್ನಡ ಆಡಳಿತ ಭಾಷಾ ವರ್ಷ' ಎಂದು ಆಚರಿಸಿದರು. ಮನರಂಜನಾ ಕ್ಷೇತ್ರದಲ್ಲೂ ಕನ್ನಡ ಭಾಷೆಗಾಗಿ ನಡೆದ ಹೋರಾಟ ಅವಿಸ್ಮರಣೀಯ. ದೂರದರ್ಶನದಲ್ಲಿ ಕನ್ನಡ ಕಾರ್ಯಕ್ರಮ ಪ್ರಸಾರಕ್ಕೆ ಒತ್ತಾಯಿಸಿ 'ಎಂಜಲು ಟೀವಿ ಉಗಿದುಬಿಡಿ, ಕನ್ನಡ ಟೀವಿ ತಂದುಕೊಡಿ' ಎಂದು ಆಂದೋಲನ ನಡೆದು ಅದು ಜನಪ್ರಿಯವೂ ಆಯಿತು. ಈ ನಡುವೆಯೇ, ಕರ್ನಾಟಕದಲ್ಲಿ, ಕನ್ನಡ ಭಾಷೆಯ ನಾಮಫಲಕದ ಕೂಗು ಅಲ್ಲಲ್ಲಿ ಕೇಳಿಸಿತು. ಸರ್ಕಾರದ ಮುಖ್ಯ ಕಾರ್ಯದರ್ಶಿ ದಾತಾರ್ ಅವರು ಮೊದಲ ಬಾರಿಗೆ ನಾಮಫಲಕದಲ್ಲಿ ಕನ್ನಡ ಕಡ್ಡಾಯ ಮಾಡುವ ಆದೇಶ ಹೊರಡಿಸಿದರು.



ಇವಿಷ್ಟು ಒಂದೆಡೆಯಾದರೆ, ಸರ್ಕಾರ ಹೊರತರುವ ಉತ್ಪನ್ನಗಳಲ್ಲೇ ಕನ್ನಡ ಕಾಣೆಯಾದದ್ದು ಕನ್ನಡ ಭಾಷಾಪ್ರೇಮಿಗಳ ಕಣ್ಣಿಗೆ ಬಿತ್ತು. ಆನಂತರ ಎಂಎಸ್‌ಐಎಲ್, ಲೇಖಕ್ ನೋಟ್ ಬುಕ್, ಮೈಸೂರು ಸ್ಯಾಂಡಲ್ ಸೋಪ್ ಇತರೆ ಉತ್ಪನ್ನಗಳ ಮೇಲೆ ಕನ್ನಡ ರಾರಾಜಿಸಿತು.

ಉದ್ಯೋಗ, ಶಿಕ್ಷಣ, ಆಡಳಿತ ಕ್ಷೇತ್ರದಲ್ಲಿ ಕನ್ನಡಕ್ಕೆ ಸಂಬಂಧಿಸಿದಂತೆ 'ಕನ್ನಡ ಅಭಿವೃದ್ಧಿ ಮಂಡಳಿ' ರೂಪುಗೊಂಡಿತು. ಆನಂತರ 'ಕನ್ನಡ ಅಭಿವೃದ್ಧಿ ಪ್ರಾಧಿಕಾರ' ರಚನೆಯಾಯಿತು. 'ಕನ್ನಡ ಪುಸ್ತಕ ಪ್ರಾಧಿಕಾರ', ಸಮಗ್ರ ಕನ್ನಡ ಭಾಷಾ ಕಾಯ್ದೆ ಕೂಡ ಅಸ್ತಿತ್ವಕ್ಕೆ ಬಂದವು. ಕನ್ನಡ ವಿಶ್ವವಿದ್ಯಾಲಯ, ಜಾನಪದ ವಿಶ್ವವಿದ್ಯಾಲಯದ ಸ್ಥಾಪನೆಗಳೂ ಹೋರಾಟದ ಫಲವೇ. ರಾಜ್ಯದ ಪ್ರಮುಖ ರಸ್ತೆಗಳಿಗೆ ಕನ್ನಡ ಸಾಧಕರ ಹೆಸರಿಡಲಾಯಿತು. ಇದೀಗ, ಹೊರ ರಾಜ್ಯಗಳಿಂದ ಬಂದ ವೃತ್ತಿನಿರತರು ಕನ್ನಡ ಕಲಿಯಬೇಕೆಂಬ ಒತ್ತಾಯ ಶುರುವಾಗಿದೆ. ಇವೆಲ್ಲವೂ ಕನ್ನಡವನ್ನು ಬೆಳಗಲೆಂದೇ ಇಟ್ಟ ಪುಟ್ಟ ಪುಟ್ಟ ದೀಪಗಳು.

ಕನ್ನಡ ಭಾಷೆಗೆ ಸಂಬಂಧಿಸಿದಂತೆ ನಡೆದ ಈ ಎಲ್ಲಾ ಹೋರಾಟ, ಘಟನೆ, ಆಂದೋಲನ, ಚಳವಳಿಗಳನ್ನು, ಕನ್ನಡಕ್ಕಾಗಿ ಹುಟ್ಟಿದ ಸಮಿತಿ, ಮಂಡಳಿ, ಸಂಸ್ಥೆಗಳ ಉದ್ದೇಶಗಳನ್ನು ಮೆಲುಕು ಹಾಕಿದರೆ, ಭಾಷೆಯ ಉಳಿವಿಗಿಟ್ಟ ಈ ಹೆಜ್ಜೆಗಳು ಸವೆಸಿದ ಸುದೀರ್ಘ ಹಾದಿ ವ್ಯರ್ಥವಾಗದಿರಲಿ ಎಂಬ ಆಶಯವಷ್ಟೇ ಹೋರಾಟಗಾರನಾದ ನನಗೆ ಬಹುದೊಡ್ಡ ಭರವಸೆ. ■

ಸರ್ಕಾರಿ ಆಸ್ಪತ್ರೆಗಳು ಮೇಲ್ದರ್ಜೆಗೇರಿವೆ. ಈ ಬದಲಾವಣೆಯನ್ನು 'ಕುದುರೆಯ ನಾಗಾಲೋಟ' ಎನ್ನಬಹುದು.

ಜನಸಂಖ್ಯೆ ಹೆಚ್ಚಾದಂತೆ ಹೆಲ್ತ್ ಕೇರ್ ಕ್ಷೇತ್ರ ಕೂಡ ಬೆಳೆಯಲಾರಂಭಿಸಿತು. ಈಗ ವೈದ್ಯಕೀಯ ಕ್ಷೇತ್ರದಲ್ಲಿ ಎಲ್ಲದಕ್ಕೂ ತಂತ್ರಜ್ಞಾನವನ್ನೇ ಅವಲಂಬಿಸಿದ್ದೇವೆ. ಬರೀ ವೈದ್ಯರೇ ಮಾಡುತ್ತಿದ್ದುದನ್ನು ಈಗ ಯಂತ್ರ ಮಾಡಲಾರಂಭಿಸಿದೆ. ಹೊಸ ತಂತ್ರಜ್ಞಾನಗಳಲ್ಲಿ ಸಿಟಿ ಸ್ಕ್ಯಾನ್, ಪೆಟ್ ಸ್ಕ್ಯಾನ್, ಎಂಆರ್‌ಐ ಸ್ಕ್ಯಾನ್ ಮೂಲಕ ದೇಹದ ಯಾವುದೇ ಭಾಗದಲ್ಲಿ ಏನೇ ತೊಂದರೆ ಆಗಿದ್ದರೂ ಕ್ಷಣಮಾತ್ರದಲ್ಲಿ ಪತ್ತೆಹಚ್ಚುವಂತಾಗಿದೆ. ಈಗ ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಬಳಸುವ ಆರೋಗ್ಯ ಸೇವೆಗಳೆಲ್ಲ ಇಲ್ಲಿಯೂ ಸಿಗುತ್ತಿದೆ. ಪಟ್ಟಣ, ತಾಲ್ಲೂಕು ಮಟ್ಟದಲ್ಲೂ ಅತ್ಯಾಧುನಿಕ ಆರೋಗ್ಯ ಸೌಕರ್ಯ ಸಿಗುತ್ತಿದೆ. ಹೃದ್ರೋಗ, ಕ್ಯಾನ್ಸರ್ ಮುಂತಾದ ಭಯಾನಕ ಕಾಯಿಲೆ ಬಂದರೆ ಚೆನ್ನೈ, ಮುಂಬಯಿಗಳಂತಹ ನಗರಗಳಿಗೆ ಚಿಕಿತ್ಸೆಗಾಗಿ ಹೋಗಬೇಕಿತ್ತು. ಈಗ ದೇಶದ ನಾನಾ ಭಾಗಗಳಿಂದ ಇಲ್ಲಿಗೆ ಬರುತ್ತಿದ್ದಾರೆ, ವಿದೇಶೀಯರೂ ಬೆಂಗಳೂರಿಗೆ ಚಿಕಿತ್ಸೆಗಾಗಿ ಬರುತ್ತಿರುವುದು ಆರೋಗ್ಯ ಕ್ಷೇತ್ರದ ಉನ್ನತೀಕರಣದ ಫಲವಾಗಿಯೇ.

ಐವತ್ತು ವರ್ಷ ಹಿಂದೆ ಇದ್ದ ಜನರ ಜೀವಿತಾವಧಿ (ಲೈಫ್ ಸ್ಪಾನ್) ಈಗ ಸುಮಾರು ಶೇ. 15ರಷ್ಟು ಹೆಚ್ಚಿದೆ. ಹಿಂದೆ 60 ವರ್ಷ ಬದುಕುತ್ತಿದ್ದ ವ್ಯಕ್ತಿ ಈಗ ಸರಾಸರಿ 75 ವರ್ಷ ಬದುಕುತ್ತಿದ್ದಾನೆ. ಇದು ಆರೋಗ್ಯಕ್ಷೇತ್ರದ ಅಸಾಧಾರಣ ಬೆಳವಣಿಗೆಗೆ ಸಾಕ್ಷಿಯಾಗಿದೆ. 1980ಕ್ಕೂ ಮುನ್ನ ನಮ್ಮಲ್ಲಿ ಫ್ಯಾಮಿಲಿ ಫಿಸೀಷಿಯನ್ ಮಾತ್ರ ಇರುತ್ತಿದ್ದರು. ಈಗ ಇವೆಲ್ಲ ಹೋಗಿ ದೊಡ್ಡ ದೊಡ್ಡ ನರ್ಸಿಂಗ್ ಹೋಮ್‌ಗಳು ಬಂದಿವೆ. ಅಂಗೈಯಲ್ಲೇ ಆರೋಗ್ಯ ಸೇವೆ ಸಿಗುವಂತಾಗಿರುವುದು ಕರ್ನಾಟಕ ಬೆಳವಣಿಗೆಯತ್ತ, ಬದಲಾವಣೆಯತ್ತ ದಾಪುಗಾಲು ಇಡುತ್ತಿರುವುದಕ್ಕೆ ಸಾಕ್ಷಿಯಾಗಿ ಕಾಣುತ್ತಿದೆ. 'ಎಲ್ಲರಿಗೂ ಆರೋಗ್ಯ, ಎಲ್ಲೆಡೆ ಆರೋಗ್ಯ' ಎಂಬುದು ಇಂದಿನ ಧ್ಯೇಯವಾಕ್ಯವಾಗಿದೆ. ■

ಕರ್ನಾಟಕ@50/ ಮಹಿಳೆ

# ಸ್ತ್ರೀಶಕ್ತಿಯ ಪರ್ವ ಕಾಲ

**ಮಂಜುಳಾ ಜಿ.ಎಚ್.**
ಸಂಶೋಧಕಿ ಹಾಗೂ ಅಧ್ಯಾಪಕಿ



ಕನ್ನಡ ನಾಡಿಗೆ ಕರ್ನಾಟಕವೆಂದು ನಾಮಕರಣಗೊಂಡು ಐವತ್ತು ವರ್ಷದ, ಅಂದರೆ ಸ್ವರ್ಣ ಮಹೋತ್ಸವದ ಆಚರಣೆಯ ಸಂದರ್ಭದಲ್ಲಿ ಮಹಿಳಾ ಕ್ಷೇತ್ರದಲ್ಲಾದ ಬೆಳವಣಿಗೆಗಳು, ಹಾಗೆಯೇ ಆ ಬೆಳವಣಿಗೆ ರಾಜ್ಯದ ಅಭಿವೃದ್ಧಿಗೆ ಪೂರಕವಾದ ನೂರಾರು ಉದಾಹರಣೆಗಳು ತೆರೆದುಕೊಳ್ಳುತ್ತವೆ.

ಆರೋಗ್ಯಕರ ಸಮಾಜಕ್ಕೆ ಮಹಿಳೆಯರ ಪಾತ್ರ, ಕೊಡುಗೆ ಹಿರಿದು ಎಂಬುದು ರಾಜ್ಯದಲ್ಲಾದ ಹಲವು ಹಂತಗಳ ಬೆಳವಣಿಗೆಯಲ್ಲಿ ಮನದಟ್ಟು ಮಾಡುವಂಥ ನಿದರ್ಶನಗಳು ಹೆಜ್ಜೆ ಹೆಜ್ಜೆಗೂ ಸಿಗುತ್ತವೆ. ಮಾಹಿತಿ ಹಕ್ಕು, ತಂತ್ರಜ್ಞಾನ, ಶಿಕ್ಷಣ, ವಿಜ್ಞಾನ, ಆರೋಗ್ಯ, ಕ್ರೀಡೆ, ರಾಜಕೀಯ – ಹೀಗೆ ಸಮಾಜದ ಪ್ರತಿಯೊಂದು ಕ್ಷೇತ್ರದಲ್ಲೂ ಮಹಿಳೆಯರು ಮೊಹರು ಹಾಕಿದ್ದು ನಮ್ಮ ರಾಜ್ಯ ಅಂತರರಾಷ್ಟ್ರೀಯ ಮಟ್ಟದಲ್ಲೂ ಹೆಸರು ಗಳಿಸಲು ಕೊಡುಗೆಯಾದವು. ಇತ್ತೀಚಿನ ಉದಾಹರಣೆಯನ್ನೇ ತೆಗೆದುಕೊಂಡರೆ, 'ಚಂದ್ರಯಾನ 3'ರಲ್ಲಿ ಕಾರ್ಯನಿರ್ವಹಿಸಿದ ಮಹಿಳೆಯರಲ್ಲಿ ಕರ್ನಾಟಕದ ಮಹಿಳೆಯರ ಪಾತ್ರ ಮೆಚ್ಚುವಂಥದ್ದು.

ಸರ್ಕಾರಗಳು ಮಹಿಳೆಯರ ಅಭಿವೃದ್ಧಿಯನ್ನೇ ಉದ್ದೇಶವಾಗಿಟ್ಟುಕೊಂಡು ತಂದ ಯೋಜನೆಗಳ ಸಂಖ್ಯೆ ಕೂಡ ಸಾಕಷ್ಟಿವೆ. 200ಕ್ಕೂ ಯೋಜನೆಗಳನ್ನು ಪರಿಚಯಿಸಲಾಗಿದೆ. ಉದ್ಯೋಗಸ್ಥ ಮಹಿಳೆಯರ ಮಗುವನ್ನು ನೋಡಿಕೊಳ್ಳಲು ಸ್ಥಾಪಿಸಿದ ಶಿಶುಪಾಲನಧಾಮ, ಮಹಿಳಾ ಸಾಂತ್ವನ ಕೇಂದ್ರ, ಟ್ರಾನ್ಸಿಟ್ ಯೋಜನೆ ಮುಂತಾದವು. ಗ್ರಾಮೀಣ ಭಾಗದ ಹೆಣ್ಣುಮಕ್ಕಳ ತರಗತಿ ಹಾಜರಾತಿಗೆ ನೀಡುವ ಸ್ಕಾಲರ್‌ಶಿಪ್, 150ಕ್ಕೂ ಹೆಚ್ಚಿನ ಮಹಿಳಾ ವಸತಿ ನಿಲಯಗಳು... ಇವೆಲ್ಲವೂ ಮಹಿಳೆಯರ ಪ್ರೋತ್ಸಾಹಕ್ಕೆ ತೆರೆದುಕೊಂಡ ದಾರಿಗಳು.

90ರ ದಶಕದ ನಂತರ, ಜಾಗತೀಕರಣಕ್ಕೆ ತೆರೆದುಕೊಳ್ಳುತ್ತಿದ್ದಂತೆ ಮಹಿಳೆಯರ ಸಾಧನೆಯ ಮೈಲುಗಲ್ಲುಗಳ ಸಂಖ್ಯೆಯೂ ಹೆಚ್ಚಾದವು. ರಾಜ್ಯನೀತಿ 2001ರ ಅಧಿನಿಯಮದಂತೆ 2001ನೇ ವರ್ಷವನ್ನು 'ಮಹಿಳಾ ಸಬಲೀಕರಣ ವರ್ಷ' ಎಂದು ಘೋಷಿಸಲಾಯಿತು. 2001ನೇ ಇಸವಿಯನ್ನು 'ಜಾಗತಿಕ ಮಹಿಳಾ ಸಬಲೀಕರಣ ವರ್ಷ'ವೆಂದು ವಿಶ್ವಸಂಸ್ಥೆ ಆಚರಿಸಿತು.

ಪ್ರಸ್ತುತ ಕಾಲಘಟ್ಟದಲ್ಲಿ ನಿಂತು ನೋಡಿದರೆ, ಸರ್ಕಾರದ ಕಾರ್ಯಕ್ರಮಗಳಿಂದ, ಯೋಜನೆಗಳಿಂದ, ಮಹತ್ವಾಕಾಂಕ್ಷೆಯನ್ನು ನಿರೀಕ್ಷಿಸುವ ನಾವು, ಸ್ವಯಂ ಪ್ರೇರಣೆಯಿಂದ ಎಲ್ಲಾ ಕ್ಷೇತ್ರಗಳಲ್ಲೂ ಮಹಿಳೆಯರ ಪಾಲ್ಗೊಳ್ಳುವಿಕೆಯನ್ನು ಪ್ರೋತ್ಸಾಹಿಸಿ, ಮುನ್ನೆಲೆಗೆ ತರುವ ಪ್ರಯತ್ನಗಳನ್ನು ಹೆಚ್ಚು ಮಾಡಬೇಕಾಗಿದೆ. ■